**OS.No.**167/2022
**ಪಿ ಡಬ್ಲ್ಯೂಃ 2**

**ದಿಃ 14-08-2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರಿದ ಪಾಟೀ ಸವಾಲುಃ 1 ರಿಂದ 6 ನೇ ಪ್ರತಿವಾದಿ ಪರ ಶ್ರೀ ಎಂ ಟಿ ಎಸ್ ವಕೀಲರಿಂದ**

ಈ ದಾವಾದಲ್ಲಿ ಹಾಜರುಪಡಿಸಿದ ಎಲ್ಲಾ ದಾಖಲೆಗಳನ್ನು ನಾನು ನೋಡಿರುತ್ತೇನೆ. ದಾವಾದ 9 ನೇ ಅನುಸೂಚಿ ಆಸ್ತಿಯು ಮೂಲತಃ 1 ನೇ ಪ್ರತಿವಾದಿಗೆ ಸೇರಿದ ಆಸ್ತಿ ಇರುತ್ತದೆ. ಸದರಿ ಆಸ್ತಿಯು 1 ನೇ ಪ್ರತಿವಾದಿಗೆ ಯಾವ ರೀತಿ ಬಂದಿರುತ್ತದೆ ಎಂದು ನನಗೆ ಗೊತ್ತಿಲ್ಲ. 1 ನೇ ಪ್ರತಿವಾದಿಯ ತಾಯಿಯ ಹೆಸರು ನನಗೆ ಗೊತ್ತಿಲ್ಲ. 1 ನೇ ಪ್ರತಿವಾದಿಗೆ ದಾವಾದ 9 ನೇ ಅನುಸೂಚಿ ಆಸ್ತಿಯು ಹೇಗೆ ಬಂದಿರುತ್ತದೆ ಎಂದು ನಾನು ದಾಖಲೆಯನ್ನು ನೋಡಿರುತ್ತೇನೆ. ಸಾಕ್ಷಿ ಪುನಃ ಮುಂದುವರೆದು ದಾಖಲೆಯನ್ನು ನೋಡಿಲ್ಲ ಎಂದು ನುಡಿಯುತ್ತಾರೆ. 1 ನೇ ಪ್ರತಿವಾದಿಗೆ ದಾವಾದ 9 ನೇ ಅನುಸೂಚಿ ಆಸ್ತಿಯು ನಾಗಮ್ಮ ಗಂಡ ಮಲ್ಲಪ್ಪ ರವರ ಕಡೆಯಿಂದ ದಾನ ಪತ್ರದ ಮೂಲಕ ಬಂದಿರುವ ವಿಷಯ ನನಗೆ ಗೊತ್ತಿಲ್ಲ. 1 ನೇ ಪ್ರತಿವಾದಿಯ ತಂದೆಯ ಹೆಸರು ನನಗೆ ಗೊತ್ತಿಲ್ಲ. 1 ನೇ ಪ್ರತಿವಾದಿಯ ಗಂಡ ಮೃತಪಟ್ಟು ಸುಮಾರು 20 ವರ್ಷಗಳು ಆಗಿರಬಹುದು. 1 ನೇ ಪ್ರತಿವಾದಿಯು ಬೆಳ್ಳಿಗನೂರು ಗ್ರಾಮದಲ್ಲಿ ವಾಸವಿದ್ದರು ಎಂದರೆ ಸರಿ. ನನಗೆ ಗೊತ್ತಿರುವಂತೆ 1 ನೇ ಪ್ರತಿವಾದಿಯು ಸುಮಾರು 20 ವರ್ಷಗಳಿಂದ ಬೆಳ್ಳಿಗನೂರು ಗ್ರಾಮದಲ್ಲಿ ವಾಸವಿರುತ್ತಾರೆ. 1 ನೇ ಪ್ರತಿವಾದಿಗೆ ಇಬ್ಬರು ಮಕ್ಕಳು ಇರುತ್ತಾರೆ. ಅವರೂ ಸಹ ಬೆಳ್ಳಿಗನೂರು ಗ್ರಾಮದಲ್ಲಿ ವಾಸವಿರುತ್ತಾರೆ. ಅವರನ್ನು ಈ ದಾವಾದಲ್ಲಿ ಪಕ್ಷಗಾರರನ್ನಾಗಿ ಮಾಡಿಲ್ಲ ಎಂದರೆ ಸರಿ. ದಾವಾದ ಅನುಸೂಚಿ 9 ಆಸ್ತಿಯನ್ನು 1 ನೇ ಪ್ರತಿವಾದಿಯು ದಾನಪತ್ರದ ಮೂಲಕ ಬಂದ ದಿನದಿಂದ ಅವರೇ ಅನುಭೋಗ ಮಾಡುತ್ತಿರುವ ಬಗ್ಗೆ ನನಗೆ ಗೊತ್ತಿಲ್ಲ. ಚನ್ನಮ್ಮರವರು ವಿಲ್ ಮೂಲಕ ಕೊಟ್ಟ ಆಸ್ತಿಗಳನ್ನು ಹೊರತುಪಡಿಸಿ ನಾವು ಬೇರೆ ಯಾವುದೇ ಆಸ್ತಿಗಳ ಅನುಭೋಗದಲ್ಲಿ ಇಲ್ಲ ಎಂದರೆ ಸರಿ. ನಾನು ನನ್ನ ತಂದೆಯನ್ನು ನೋಡಿಲ್ಲ. ನನಗೆ ಬುದ್ದಿ ಬಂದಾಗಿನಿಂದ ವಿಲ್ ನ ಮೂಲಕ ಬಂದ ಆಸ್ತಿಗಳನ್ನು ಹೊರತುಪಡಿಸಿ ಬೇರೆ ಆಸ್ತಿಗಳ ಅನುಭೋಗದಲ್ಲಿ ಇಲ್ಲ ಎಂದರೆ ಸರಿ. ನಮ್ಮ ತಂದೆ ಮತ್ತು ನಿಂಗಪ್ಪರವರು ತಮಗೆ ಬರಬೇಕಾದ ಆಸ್ತಿಗಳಲ್ಲಿ ಜುಬಾನೆ ಹಿಸ್ಸೆ ಮೂಲಕ ಪಾಲು ಮಾಡಿಕೊಂಡಿರುವುದರಿಂದ ನಾವು ಮತ್ತು ಪ್ರತಿವಾದಿಯರು ಜಂಟಿ ಕುಟುಂಬದಲ್ಲಿ ಇರಲಿಲ್ಲ ಎಂದರೆ ಸರಿಯಲ್ಲ. ನಾವು ಯಾವುದೇ ಜುಬಾನೆ ಹಿಸ್ಸೆ ಮಾಡಿಕೊಂಡಿಲ್ಲ ಎಂದು ನುಡಿಯುತ್ತಾರೆ. ಜುಬಾನೆ ಹಿಸ್ಸೆಯಲ್ಲಿ ವಿಲ್ ಮೂಲಕ ಬಂದ ಆಸ್ತಿಗಳು ನಮ್ಮ ತಂದೆಯ ಪಾಲಿಗೆ ಬಂದಿರುವುದರಿಂದ ಅವುಗಳಿಗೆ ಸಂಬಂಧಿಸಿದಂತೆ ಖಾತೆ ಬದಲಾವಣೆ ಆಗಿರುತ್ತದೆ ಎಂದರೆ

ಸರಿಯಲ್ಲ.

ಮರುವಿಚಾರಣೆ: ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ ಎಂ ಎಫ್ ಸಿ., ಚನ್ನಗಿರಿ.